

ತಂಡವೇ ಇಲ್ಲದೆ ನಡೆಯಲಿದೆ. ಸ್ಕಾಟ್ಲೆಂಡ್ ಎದುರು ಸೋತಮೇಲೆ ವೆಸ್ಟ್ ಇಂಡೀಸ್ ತಂಡ ವಿಶ್ವಕಪ್ ಅರ್ಹತೆ ಪಡೆಯದೆಯೇ ಮುಖ ಬಾಡಿಸಿಕೊಂಡಿತು. 1975, 79ರಲ್ಲಿ ವಿಶ್ವಕಪ್ ಗೆದ್ದಿದ್ದ ತಂಡದ ಗತವೈಭವ ಮೆಲುಕು ಹಾಕಿದರೆ ಕ್ರಿಕೆಟ್‌ಪ್ರಿಯರ ಕರುಳು ನಿಜಕ್ಕೂ ಚುರ್ರೆನ್ನುತ್ತದೆ.

ಹೋಲ್ಡಿಂಗ್, ರಾಬರ್ಟ್ಸ್ ಜತೆಗೆ ಹಸನ್ಮುಖಿ ಕೋಲಿನ್ ಕ್ರಾಫ್ಟ್, ಜಿಯೊಲ್ ಗಾರ್ನರ್, ಮಾಲ್ಕಂ ಮಾರ್ಷಲ್ – ಹೀಗೆ, ವೇಗದ ಬೌಲರ್‌ಗಳ ಪಟ್ಟಿ 1975ರ ನಂತರ ಥಾಳಾಗಿ ಕಂಡಿತು. ಇನ್ನೊಂದೆಡೆ, ಲಾನ್ಸ್ ಗಿಬ್ಸ್ ಎಂಬ ಜಾಣ ಆಫ್ ಸ್ಪಿನ್ನರ್. ಕ್ಲೈವ್ ಲಾಯ್ಡ್ ಇವಿಷ್ಟೂ ಜನರ ಪಡೆಯನ್ನು ಎಷ್ಟರ ಮಟ್ಟಿಗೆ ಬಳಸಿಕೊಂಡರೆಂದರೆ, ಒಂದೂವರೆ ದಶಕದಲ್ಲಿ ವೇಗಿಗಳೆಲ್ಲ ಸೇರಿ 1200 ಟೆಸ್ಟ್ ವಿಕೆಟ್‌ಗಳನ್ನು ಕಿತ್ತಿದ್ದರು.

ಕೆರೀಬಿಯಾದ 13 ದ್ವೀಪರಾಷ್ಟ್ರಗಳ ಆಟಗಾರರನ್ನೆಲ್ಲ ಒಗ್ಗೂಡಿಸಿಕೊಂಡ ತಂಡ ವಿಂಡೀಸ್. 2,900 ಕಿ.ಮೀ. ವ್ಯಾಪ್ತಿಯಲ್ಲಿ ಅವರೆಲ್ಲ ಹಂಚಿ ಹೋಗಿರುವವರು. ಅವರೆಲ್ಲರಲ್ಲಿ ಆಟದ ಹಸಿವು ತುಂಬುವುದು ಸಲೀಸಲ್ಲ. 1962ರಲ್ಲಿ 'ವೆಸ್ಟ್ ಇಂಡೀಸ್ ಫೆಡರೇಷನ್' ಕುಸಿದ ನಂತರ ರಾಜಕೀಯ ಒಕ್ಕೂಟ ವ್ಯವಸ್ಥೆಯೇ ಅಲ್ಲಿ ಬಿದ್ದುಹೋಯಿತು.



ಆ ಹೋಲ್ಡಿಂಗ್
ಈಗ ಹೀಗಿದ್ದಾರೆ




ಆ್ಯಕ್ಷನ್‌ನಲ್ಲಿ
ಆಂಡಿ ರಾಬರ್ಟ್ಸ್

ಹಾಗಿದ್ದೂ ಕೆರೀಬಿಯನ್ ದ್ವೀಪಗಳನ್ನೆಲ್ಲ ಒಂದು ತೆಕ್ಕೆಗೆ ತಂದು, ವೆಸ್ಟ್ ಇಂಡೀಸ್ ಎಂದು ಜಾಗತಿಕ ನಕಾಶೆಯಲ್ಲಿ ಮಿಂಚುವಂತೆ ಮಾಡಿದ್ದೇ ಕ್ರಿಕೆಟ್. ಕ್ಲೈವ್ ಹ್ಯೂಬರ್ಟ್ ಲಾಯ್ಡ್ ಎನ್ನುವುದು ಪೂರ್ತಿ ಹೆಸರು. ಅವರನ್ನು 'ಹ್ಯೂಬರ್ಟ್' ಎಂಬ, ಅವರ ಹೆಸರಿನ ಮಧ್ಯದ ಪದದಿಂದಲೇ ಆಪ್ತೇಷ್ಟರು ಕರೆಯುತ್ತಿದ್ದರು. ವಿಂಡೀಸ್ ಕ್ರಿಕೆಟ್‌ನ ಈ ಮೆರುಗನ್ನು ನೋಡಿಯೇ ಸಿಎಲ್‌ಆರ್ ಜೇಮ್ಸ್ 'ಬಿಯಾಂಡ್ ಎ ಬೌಂಡರಿ' ಎಂಬ ಅರ್ಥವತ್ತಾದ ಕೃತಿ ಬರೆದಿದ್ದರು. ವಸಾಹತುಶಾಹಿ ವ್ಯವಸ್ಥೆಯಲ್ಲಿಯೂ ಆಟವೆನ್ನುವುದು ಹೇಗೆಲ್ಲ ಅರಳಿತ್ತೆಂಬುದನ್ನು ಅವರು ತಮ್ಮ ನೆನಪಿನೊಂದಿಗೆ ನೇಯ್ದಿದ್ದ ಕೃತಿ ಅದು. ಅದರಲ್ಲಿ ಒಂದೆಡೆ ಅವರು, 'ಬಲವರ್ಧನೆ ಆಯಿತು, ಇನ್ನೇನಿದ್ದರೂ ವಿಶ್ರಾಂತಿ ಎಂಬಂತಹ ಸ್ಥಿತಿಗೆ ನಾವು ವೆಸ್ಟ್ ಇಂಡಿಯನ್ನರು ಎಂದೂ ತಲುಪಲೇ ಇಲ್ಲ' ಎಂದು ಬರೆದಿದ್ದಾರೆ. ಬಹುಶಃ ಈಗ ವಿಂಡೀಸ್ ಕ್ರಿಕೆಟ್‌ಗೆ ಬಂದೊದಗಿದ ಸ್ಥಿತಿಗೂ ಅವರ ಈ ಮಾತನ್ನು ಅನ್ವಯಿಸಬಹುದು. ಈ ಪುಸ್ತಕ ಬರೆದಿದ್ದ ಜೇಮ್ಸ್ 1989ರಲ್ಲಿ ಮೃತಪಟ್ಟರು. 1990ರ ದಶಕದಿಂದಲೇ ವಿಂಡೀಸ್ ಕ್ರಿಕೆಟ್‌ನ ಗ್ರಾಫ್‌ನಲ್ಲಿ ಏರುಪೇರು ಕಾಣಿಸಿಕೊಳ್ಳಲಾರಂಭಿಸಿತು.

ಲಾಯ್ಡ್ ತಂಡವನ್ನು ಕಟ್ಟಿದ ರೀತಿಯನ್ನು ಕಂಡಿದ್ದ ವಿವಿಯನ್ ರಿಚರ್ಡ್ಸ್ ಆಮೇಲೆ ಅದನ್ನು ಚೆನ್ನಾಗಿ ಮುಂದುವರಿಸಿದ್ದರು. ಅವರಾದ ಮೇಲೆ ರಿಚಿ ರಿಚರ್ಡ್ಸನ್ ಕೂಡ ಆ ಪರಂಪರೆಯನ್ನು ಮುದ್ದಿಸುವ ಲಕ್ಷಣ ತೋರಿದ ನಾಯಕ ಎನಿಸಿಕೊಂಡರು.

ಎರಡನೇ ವಿಶ್ವಯುದ್ಧಕ್ಕೆ ಮೊದಲು ಜಾರ್ಜ್ ಹೆಡ್ಲಿ ವೆಸ್ಟ್‌ಇಂಡೀಸ್ ತಂಡದ ನಾಯಕ ಆಗಿದ್ದರು. ಅವರಾದ ಮೇಲೆ ಒಂದು ದಶಕಕ್ಕೂ ಹೆಚ್ಚು ಅವಧಿ ವಿಂಡೀಸ್ ತಂಡದವರು ಬಿಳಿ ಬಣ್ಣದ ನಾಯಕರ ಅಡಿಯೇ ಆಡುತ್ತಿದ್ದುದು. ಫ್ರ್ಯಾಂಕ್ ವೋರೆಲ್ 1960ರ ದಶಕದಲ್ಲಿ ತಂಡದ ಎರಡನೇ ಕಪ್ಪು ಬಣ್ಣದ ನಾಯಕ ಎನಿಸಿಕೊಂಡರು. ಜಮೈಕಾದ ಸೆನೆಟರ್ ಕೂಡ ಆಗಿದ್ದ ಅವರು ಬಲಗೈ ಬ್ಯಾಟ್ಸ್‌ಮನ್, ಎಡಗೈ ವೇಗದ ಬೌಲರ್. ಇಂಗ್ಲೆಂಡ್‌ನ ಕೌಂಟಿ ಕ್ರಿಕೆಟ್‌ನಲ್ಲಿ ಆಟದ ಕೌಶಲಗಳನ್ನು ಚೆನ್ನಾಗಿ ಕಲಿತುಕೊಂಡು ಬಂದಿದ್ದರು. ಆಸ್ಟ್ರೇಲಿಯಾ, ಇಂಗ್ಲೆಂಡ್, ಭಾರತ ತಂಡಗಳ ಎದುರು 15 ಟೆಸ್ಟ್‌ಗಳಲ್ಲಿ ಅವರು ತಂಡವನ್ನು ಮುನ್ನಡೆಸಿದ್ದರು. ಆ ಪೈಕಿ ಒಂಬತ್ತರಲ್ಲಿ ಗೆಲುವು ಒಲಿದಿತ್ತೆನ್ನುವುದು ಅವರ ಕೌಶಲಕ್ಕೆ ಕನ್ನಡಿ. ಅವರ ನಂತರ ಗ್ಯಾರ್‌ಫೀಲ್ಡ್ ಸೋಬರ್ಸ್ 39 ಟೆಸ್ಟ್‌ಗಳಲ್ಲಿ ನಾಯಕರಾಗಿ, ಒಂಬತ್ತು ಗೆಲುವು ತಂದಿತ್ತರು. 10 ಸಲ ಸೋಲು ಎದುರಾಗಿತ್ತು. ಆಮೇಲೆ ರೋಹನ್ ಕನ್ಹಾಯ್ 13 ಟೆಸ್ಟ್‌ಗಳಲ್ಲಿ ನಾಯಕನ ನೊಗ ಹೊತ್ತರು. ಎರಡು ಮೂರು ವರ್ಷಗಳ ಆ ಅಲ್ಪಾವಧಿಯಲ್ಲಿ ವಿಂಡೀಸ್ ಗೆದ್ದಿದ್ದು ಮೂರು ಟೆಸ್ಟ್. ಸೋತದ್ದೂ ಅಷ್ಟೇ ಪಂದ್ಯಗಳಲ್ಲಿ. ಡ್ರಾ ಆದ ಪಂದ್ಯಗಳ ಸಂಖ್ಯೆ ಏಳು. ಕ್ಲೈವ್ ಲಾಯ್ಡ್ 1974ರಲ್ಲಿ ತಂಡದ ನಾಯಕರಾದರು. 85ರವರೆಗೆ ದೀರ್ಘಾವಧಿ ಅವರದ್ದೇ ಗರಡಿ. 79 ಟೆಸ್ಟ್‌ಗಳಲ್ಲಿ 36ರಲ್ಲಿ ಗೆಲುವು. ಸೋತಿದ್ದು ಬರೀ 12ರಲ್ಲಿ. ವಿವಿಯನ್ ರಿಚರ್ಡ್ಸ್ ಕೂಡ 1980ರಿಂದ 1991ರವರೆಗೆ ಟೆಸ್ಟ್ ನಾಯಕರಾಗಿ 50 ಪಂದ್ಯಗಳಲ್ಲಿ 27ನ್ನು ಗೆಲ್ಲಿಸಿಕೊಟ್ಟರು. ಸೋತದ್ದು